**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ. ಹೆಚ್. ಪೂಜಾರ, ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ**

**ವಿಷಯ:-** ಬಾಗಲಕೋಟೆ ಜಿಲ್ಲೆಯ ತೋಟಗಾರಿಕೆ ವಿವಿಯು ಶೈಕ್ಷಣಿಕವಾಗಿ ದೇಶದಲ್ಲಿ ಗಮನ ಸೆಳೆದಿರುವ ಇಲ್ಲಿನ ರಾಜ್ಯದ ಏಕಮಾತ್ರ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು ಎದುರಿಸುತ್ತಿದ್ದೂ, ಹಣಕಾಸಿಗೆ ಬರ ಸರ್ಕಾರದಿಂದ ವಾರ್ಷಿಕವಾಗಿ ಲಭ್ಯವಾಗುತ್ತಿರುವ ಅನುದಾನವು ಸಿಬ್ಬಂದಿಗಳ ಸಂಬಳಕ್ಕೂ ಸಾಲುತ್ತಿಲ್ಲ ಎಂಬುದು ಬೇಸರ ಹಾಗೂ ದುಸ್ಥಿತಿಯ ಸಂಗತಿಯೇ ಹೌದು.

ವಿಶ್ವವಿದ್ಯಾಲಯದ ಸಂಬಳ ಖರ್ಚುಗಳನ್ನು ಸರಿದೂಗಿಸಲು 150 ಕೋಟಿ ರೂ.ಗಳ ಅನುದಾನ ಅವಶ್ಯಕತೆವಿದ್ದು, ಸರ್ಕಾರವು 138 ಕೋಟಿ ರೂ.ಗಳನ್ನು ಒದಗಿಸಿದೆ. ಈ ಪೈಕಿ ಇನ್ನು 3 ಕೋಟಿ ರೂ. ಗಳಷ್ಟು ಮತ್ತ ಬರಬೇಕಿದೆ ಹೊರಗುತ್ತಿಗೆ ಸಿಬ್ಬಂದಿಗಳಿಗೆ ವಾರ್ಷಿಕ 8 ರಿಂದ 10 ಕೋಟಿ ರೂ. ಗಳಷ್ಟು ಬೇಕಾಗುತ್ತದೆ. ಖಾಯಂ ಸಿಬ್ಬಂದಿಗಳಿಗೆ ವಾರ್ಷಿಕ 180 ಕೋಟಿ ರೂ.ಗಳವರೆಗೆ ಸಂಬಳ ಪಾವತಿಸಬೇಕಾಗುತ್ತದೆ ಎಂದು ವರದಿಯಾಗಿದೆ. ವಿಶ್ವವಿದ್ಯಾಲಯ ಸಂಶೋಧನೆಗೆ ನಯಾ ಪೈಸಾ ಲಭ್ಯವಿಲ್ಲ ಎಂದು ಜನರ ಮಾತಾಗಿದೆ. ಹೊರ ಗುತ್ತಿಗೆ ನೌಕರರಿಗೆ ಸರ್ಕಾರ ಸಂಬಳ ನೀಡಲು ನಿರಾಕರಿಸಿ ಸ್ಥಳೀಯ ಸಂಪನ್ಮೂಲ ಬಳಸಿಕೊಂಡು ನೀಡುವಂತೆ ವಿ ವಿ ಗೆ ಸೂಚಿಸಿದೆ ವಾರ್ಷಿಕ ವಿವಿ 25 ಕೋಟಿ ರೂ.ಗಳ ಆದಾಯ ಹೊಂದಿದ್ದರು. ಸಂಬಳಕ್ಕೆ ಬಹುಪಾಲು ಮೊತ್ತವನ್ನು ಖರ್ಚು ಮಾಡಿದರೆ ಮೂಲಸೌಕರ್ಯ, ಸಂಶೋಧನೆಗೆ ಹಣ ಹೊಂದಿಸಲು ಹೇನಗಾಡುಬೇಕಾದ ಸ್ಥಿತಿ ಇರುವುದು ದೊಡ್ಡ ದುರ್ದೈವ. ಜನಸಂಖ್ಯೆ ಹೆಚ್ಚುತ್ತಿದ್ದು, ಕೃಷಿ ಭೂಮಿ ಪ್ರಮಾಣ ಕಡಿಮೆಯಾಗುತ್ತಿರುವಾಗ ಸಂಶೋಧನೆಗೆ ಆದ್ಯತೆ ನೀಡಿ ಕಡಿಮೆ ಭೂಮಿ ಹೆಚ್ಚಿನ ಬೆಲೆಯನ್ನು ತೆಗೆಯುವ ನಿಟ್ಟಿನಲ್ಲಿ ಸಂಶೋಧನೆಗೆ ಆದ್ಯತೆ ನೀಡಬೇಕಿದೆ ಎಂದು ವರದಿ ತಿಳಿಸಿದೆ.

ಈ ನಿಟ್ಟಿನಲ್ಲಿ ಶೈಕ್ಷಣಿಕ ಸಾಧನೆ ಮಾಡುತ್ತಿರುವ ವಿಶ್ವವಿದ್ಯಾಲಯಗಳ ಸವಾಲುಗಳನ್ನು ಪರಿಗಣಿಸಿ, ವಿಶ್ವವಿದ್ಯಾಲಯಗಳ ಬೇಡಿಕೆಗಳನ್ನು ಈಡೇರಿಸಲು ಸೂಕ್ತ ಕ್ರಮಕೈಗೊಂಡು, ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ಬೇಕಾಗುವ ಅನುದಾನವನ್ನು ಕಲ್ಪಿಸಬೇಕೆಂದು ಈ ಮೂಲಕ ಶೂನ್ಯ ವೇಳೆಯಲ್ಲಿ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಉತ್ತರ:-** ಬಾಗಲಕೋಟೆಯಲ್ಲಿರುವ ತೋಟಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾಲಯವನ್ನು ಪ್ರಧಾನವಾಗಿ ತೋಟಗಾರಿಕೆಯಲ್ಲಿ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳನ್ನು ಕೈಗೊಳ್ಳುವ ಸಲುವಾಗಿ ಸ್ಥಾಪಿಸಲಾಗಿರುತ್ತದೆ. ಪ್ರಮುಖ ಉದ್ದೇಶವಾದ ಶಿಕ್ಷಣ ಕಾರ್ಯವನ್ನು ಈ ವಿಶ್ವ ವಿದ್ಯಾಲಯವು ಯಶಸ್ವಿಯಾಗಿ ಕೈಗೊಳ್ಳುತ್ತಲಿದೆ. ಪ್ರತಿ ವರ್ಷ ಸರಾಸರಿ 412 ಪದವೀದರರು, 100 ಸ್ನಾತಕೋತ್ತರ ಪದವೀದರರು, 27 ಡಾಕ್ಟರೇಟ್ ಪಡೆದ ಅಭ್ಯರ್ಥಿಗಳು ಹೊರಬರುತ್ತಿದ್ದಾರೆ. ಇದರಿಂದ ರಾಜ್ಯದ ಪ್ರಧಾನ ವಲಯವಾದ ತೋಟಗಾರಿಕೆಯಲ್ಲಿ ಉತ್ತಮ ತಂತ್ರಜ್ಞಾನ ಪ್ರಸರಣೆಗೆ ಸಾಧ್ಯವಾಗುತ್ತಿದೆ, ಜೊತೆಗೆ ಉದ್ಯೋಗ ಸೃಷ್ಟಿ, ಉತ್ಪಾದನೆಯಲ್ಲಿ ಹೆಚ್ಚಳ ಹಾಗೂ ಉತ್ಪನ್ನಗಳ ಗುಣಮಟ್ಟ ಸುಧಾರಣೆಗೆ ಸಾಧ್ಯವಾಗಿದೆ.

ಸದರಿ ಸಂಸ್ಥೆಯಿಂದ ಕೈಗೊಳ್ಳಲಾಗುತ್ತಿರುವ ಸಂಶೋಧನಾ ಕ್ರಮಗಳ ಬಗ್ಗೆ, ಈ ಸಂಸ್ಥೆಯು ಈವರೆಗೆ 106 ನೂತನ ವಿವಿಧ ತೋಟಗಾರಿಕೆ ತಳಿಗಳನ್ನು ಮತ್ತು ತೋಟಗಾರಿಕೆಗೆ ಸಂಬಂಧಿಸಿದ 318 ಹೊಸ ತಂತ್ರಜ್ಞಾನಗಳನ್ನು ಅಭಿವೃದ್ಧಿ ಪಡಿಸಿದೆ.

2025-26 ನೇ ಸಾಲಿನಲ್ಲಿ ICAR ಸಂಸ್ಥೆಯ ನೆರವಿನಿಂದ 3 ಕೋಟಿ ರೂಪಾಯಿಗಳ ವೆಚ್ಚದಲ್ಲಿ 11 ತಂತ್ರಜ್ಞಾನಗಳ ಬಗ್ಗೆ ಸಂಶೋಧನೆ ಪ್ರಗತಿಯಲ್ಲಿದೆ. ರಾಜ್ಯ ಸರ್ಕಾರದ ನೆರವಿನ ಅನುದಾನದಿಂದ ಕೈಗೊಳ್ಳಲಾಗುತ್ತಿರುವ ಸಂಶೋಧನೆಗಳು ಕೆಳಗಿನಂತಿವೆ:-

1. ಕರ್ನಾಟಕ ಸರ್ಕಾರದಿಂದ ಆಯವ್ಯಯ ಭಾಷಣದ ಕಂಡಿಕೆ 48 (ತೋಟಗಾರಿಕೆ ಬೆಳಗಳ ಪ್ರಚಲಿತ, ವಾಸ್ತವಿಕ ವಿಸ್ತೀರ್ಣ, ಉತ್ಪಾದನೆ, ಆರೋಗ್ಯ ಹಾಗೂ ಮಾರುಕಟ್ಟೆ ಮಾಹಿತಿ ಜ್ಞಾನ ಕೇಂದ್ರ ಸ್ಥಾಪನೆ), 49 (ರಾಜ್ಯದ 20 ಜಿ. ಐ ಟ್ಯಾಗ್ ಹೊಂದಿರುವ ಬೆಳೆಗಳು ಹಾಗೂ ಇತರೆ ದೇಸಿ ತಳಿಗಳ ಬೀಜ ಬ್ಯಾಂಕ್ ಸ್ಥಾಪನೆ) ಮತ್ತು 50 (ಬ್ಯಾಡಗಿ ಮೆಣಸಿನ ಕಾಯಿ ತಳಿಯ ಸಂರಕ್ಷಣೆ ಮತ್ತು ಸಂಶೋಧನೆ) ರಂತೆ ಒಟ್ಟು 714.00 ಲಕ್ಷ ರೂಪಾಯಿಗಳ ಅನುದಾನವನ್ನು ಸಶೋಧನೆಗಾಗಿ ಬಿಡುಗಡೆ ಮಾಡಲಾಗಿದೆ.

2. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RAFTAAR) ಅಡಿಯಲ್ಲಿ ಒಟ್ಟು 2 ಕೋಟಿ 13 ಲಕ್ಷ ರೂಪಾಯಿಗಳ ಅನುದಾನವನ್ನು ಪ್ರಸಕ್ತ ವರ್ಷದಲ್ಲಿ ಬಿಡುಗಡೆ ಮಾಡಲಾಗಿರುತ್ತದೆ (ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಯೋಗದಿಂದ).

3. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದಲ್ಲಿ ವಿವಿಧ ತೋಟಗಾರಿಕೆ ಬೆಳೆಗಳ ಮೇಲೆ ಸಂಶೋಧನೆಯನ್ನು ಕೈಕೊಳ್ಳಲಾಗುತ್ತಿದ್ದು, ಸಂಶೋಧನಾ ಯೋಜನೆಗಳು ವಿವಿಧ ಹಂತದಲ್ಲಿ ಇರುತ್ತವೆ. ಸದರಿ ಯೋಜನೆಗಳು ಸಂಪೂರ್ಣಗೊಳಿಸಲು ರೂ. 4.00 ಕೋಟಿಯ ಅನುದಾನದ ಅವಶ್ಯಕತೆ ಇರುತ್ತದೆ.

ಅಲ್ಲದೇ, ಕೆಳಕಾಣಿಸಿದ ಸಂಶೋಧನಾ ಚಟುವಟಿಕೆಗಳಿಗಾಗಿ ICAR/GOI ಸಂಸ್ಥೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ:-

1. ಡಿಜಿಟಲ್ ಪ್ರಿಸಿಜನ್ ಹಾರ್ಟಿಕಲ್ಚರ್
2. ತೋಟಗಾರಿಕೆಯಲ್ಲಿ ಸೌರಶಕ್ತಿ ಬಳಕೆ
3. ಅಟಲ್ ಭೂ ಜಲ ಯೋಜನೆಯಲ್ಲಿ ಕಿರು ನೀರಾವರಿ
4. ತೋಟಗಾರಿಕೆಯಲ್ಲಿ ಮುಂಚುಣಿ ತಂತ್ರಜ್ಞಾನ ಕೇಂದ್ರದ ಸ್ಥಾಪನೆ
5. ತೋಟಗಾರಿಕೆಯಲ್ಲಿ ಸಾವಯವ ಮತ್ತು ನೈಸರ್ಗಿಕ ಸಂಶೋಧನೆ

ತೋಟಗಾರಿಕೆ ಕ್ಷೇತ್ರವು ರಾಜ್ಯದಲ್ಲಿ ತೀವ್ರ ಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿದ್ದು, ಮಾನವ ಸಂಪನ್ಮೂಲದ ಕೊರತೆಯನ್ನು ನೀಗಿಸಿ ರೈತ ಮಕ್ಕಳಿಗೆ ತೋಟಗಾರಿಕೆ ತಂತ್ರಜ್ಞಾನದ ಉತ್ತಮ ಶಿಕ್ಷಣವನ್ನು ದೊರೆಯುವಂತೆ ಮಾಡಲು ಈ ವಿಶ್ವವಿದ್ಯಾಲಯದ ವತಿಯಿಂದ ವಿಜಯಪುರ ಜಿಲ್ಲೆಯ ಅಲಮೇಲದಲ್ಲಿ ಹೊಸ ಕಾಲೇಜನ್ನು ಸ್ಥಾಪಿಸಲಾಗುತ್ತಿದೆ. ವಿಶ್ವವಿದ್ಯಾಲಯದ ಶೈಕ್ಷಣಿಕ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳಿಗೆ ಅಗತ್ಯ ಅನುದಾನವನ್ನು ಹಂತ ಹಂತವಾಗಿ ಪೂರೈಸುವುದು ಸರ್ಕಾರದ ನಿಲುವಾಗಿದೆ.

**ಸಂಖ್ಯೆ: HORTI 645 HGM 2025**

**(ಎಸ್. ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**